# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1645\2014\ಸನಿಕಾಸ–2 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 4.11.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಖಾಸ್ಬಾಗೆ ಸೇರಿದ ಸರ್ವೆ ನಂ. 9 ರಿಂದ 13 ಮತ್ತು ವೀರಭದ್ರನಪಾಳ್ಯದ ಸರ್ವೆ ನಂ.6, 8, 11, 14, 25, 26, 29 ಹಾಗೂ ಸರ್ವೆ ನಂ.19 ರಲ್ಲಿ 3 ಗುಂಟೆ ಅಳತೆಯ ಕಾಳಪ್ಪನಕುಂಟೆ ಪ್ರದೇಶವನ್ನು ಅನಧೀಕೃತ ಒತ್ತುವರಿದಾರರಿಂದ, ಖಾತೆದಾರರಿಂದ ತೆರವುಗೊಳಿಸಿ ಪುರಸಭೆ ಸ್ವಾಧೀನಕ್ಕೆ ಪಡೆದುಕೊಳ್ಳುವ ಕುರಿತು.

*******

ಶ್ರೀ.ಡಿ.ಜಿ.ರಂಗನಾಥ್ ಸಂಜಯನಗರ, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ.ಕೆ.ನರಸಿಂಹಮೂರ್ತಿ, ಪೌರಾಯುಕ್ತರು, ನಗರ ಸಭೆ, ದೊಡ್ಡಬಳ್ಳಾಪುರ, (2) ಶ್ರೀ.ಎಂ.ಕೆ.ರಮೇಶ್, ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬಳ್ಳಾಪುರ ಮತ್ತು (3) ಶ್ರೀ.ಬಿ.ಹೆಚ್.ತಿಮ್ಮಪ್ಪ, ತಾಲ್ಲೂಕು ಸರ್ವೇಯರ್, ದೊಡ್ಡಬಳ್ಳಾಪುರ ತಹಶೀಲ್ದಾರ್ ರವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ಈ ಹಿಂದೆ ಲೋಕಾಯುಕ್ತ ಪ್ರಕರಣಗಳಾದ ಬಿ.ಡಿ/482/2010 ಮತ್ತು ಬಿ.ಡಿ/1449/2013 ಗಳಲ್ಲಿ ಎದರುದಾರರಿಗೆ ಗೌರವಾನ್ವಿತ

ಉಪಲೋಕಾಯುಕ್ತರು ಆದೇಶ ನೀಡಿದ್ದು, ಅದನ್ನು ಪಾಲಿಸದೇ ಅತಿಕ್ರಮಣದಾರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಸರ್ಕಾರಿ ಜಮೀನನ್ನು ಅತಿಕ್ರಮಣದಾರರಿಂದ ತೆರವುಗೊಳಿಸದೇ ಅವರ ನಿವೇಶನಗಳಿಗೆ ನಗರಸಭೆಯಿಂದ ಒಳಚರಂಡಿ ನಿರ್ಮಿಸುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಹೆಸರಿನಲ್ಲಿ ಖಾತೆಯಾಗಿರುವ ಜಮೀನಿನ ಬಗ್ಗೆ ದೊಡ್ಡಬಳ್ಳಾಪುರ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ನಂ.256/2011 ರಲ್ಲಿ ದಿ:29-1-2015 ಖಾಯಂ ತಡೆಯಾಜ್ಞೆ ತಂದಿರುತ್ತಾರೆ. ಖಸ್ಬಾಗೆ ಸೇರಿದ ಸರ್ವೆ ನಂ.9 ರಿಂದ 13 ಮತ್ತು ವೀರಭದ್ರನ ಪಾಳ್ಯದ ಸರ್ವೆ ನಂ.6, 8, 11, 14, 25, 26 & 29 ಸರ್ಕಾರಿ ಜಾಗವನ್ನು ಸರ್ವೆ ಮಾಡಿ ಒತ್ತುವರಿದಾರರಿಂದ ನಕ್ಷೆ ನೀಡಿದಲ್ಲಿ ಅಂತಹ ಆಸ್ತಿಗಳನ್ನು ಗುರುತು ಮಾಡಿ ಅನಧಿಕೃತವಾಗಿ ಖಾತೆ ದಾಖಲೆಯಾಗಿದ್ದಲ್ಲಿ ರದ್ದುಪಡಿಸಲು ಅಗತ್ಯ ಕ್ರಮ ಅನುಸರಿಸಲಾಗುವುದು. ಸರ್ವೆ ನಂ.19 ರಲ್ಲಿ 3 ಗುಂಟೆ ಅಳತೆಯ ಕಾಳಪ್ಪನ ಕುಂಟೆ ಒತ್ತುವರಿಯಾಗಿರುತ್ತದೆ. ಆದರೆ ಇದರಲ್ಲಿ ತಾತ್ಕಾಲಿಕ ತಡೆಗೋಡೆಯಾಗಲೀ, ತಂತಿಬೇಲಿಯಾಗಲೀ ನಿರ್ಮಿಸಿರುವುದಿಲ್ಲ ಅಂತಾ ತಿಳಿಸಿದ್ದಾರೆ.

4. ಎದರುದಾರ ನಂ.2 ರವರು ತಮ್ಮ ಆಕ್ಷೇಪಣೆಯಲ್ಲಿ ಸದರಿ ದೂರಿನಲ್ಲಿ ತಮ್ಮ ವಿರುದ್ಧ ಯಾವುದೇ ಆಪಾದನೆ ಇರುವುದಿಲ್ಲವಾದ್ದರಿಂದ ಪ್ರಕರಣದಿಂದ ತಮ್ಮನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

5. ಎದರುದಾರ ನಂ.3 ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ಕರ್ತವ್ಯ ನಿರ್ವಹಿಸುತ್ತಿರುವಾಗ ಸರ್ವೆ ನಂ.9/2 ರ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಅರ್ಜಿ ಸ್ವೀಕರಿಸಿರುವುದಿಲ್ಲವಾದ್ದರಿಂದ ಸದರಿ ಪ್ರಕರಣದಿಂದ ತಮ್ಮನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

6. ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) "ಎದರುದಾರ ನಂ.1 ರವರು ಸರ್ವೆ ನಂ.19 ರಲ್ಲಿ 3 ಗುಂಟೆ ಅಳತೆಯ ಕಾಳಪ್ಪನಕುಂಟೆ ಒತ್ತುವರಿಯಾಗಿದೆಂದು ಒಪ್ಪಿಕೊಂಡಿದ್ದಾರೆ. ಆದರೆ, ಇದನ್ನು ತೆರವುಗೊಳಿಸಿ ಪುರಸಭೆ ಸ್ವಾಧೀನಕ್ಕೆ ಪಡೆದಿರುವುದಿಲ್ಲ. ಎದರುದಾರರು ಪುರಸಭೆ ವ್ಯಾಪ್ತಿಯಲ್ಲಿಯ ಆಸ್ತಿಗಳನ್ನು ಅತಿಕ್ರಮಣದಾರರಿಂದ ರಕ್ಷಿಸುವುದು ಅವರ ಕರ್ತವ್ಯವಾಗಿರುತ್ತದೆ. ಈ ರೀತಿ ಪುರಸಭೆ ಆಸ್ತಿಗಳನ್ನು ಯಾರಾದರೂ ಅನಧೀಕೃತವಾಗಿ ಒತ್ತುವರಿ ಮಾಡಿದರೆ ಅಥವಾ ಖಾತೆ ಬದಲಾವಣೆ ಮಾಡಿದ್ದಾರೆಂದು ದೂರು ಬಂದರೆ ತಕ್ಷಣವೇ ಆ ಬಗ್ಗೆ ಕ್ರಮ ಕೈಗೊಳ್ಳುವುದು ಎದರುರಾರ ನಂ.1 ರವರ ಕರ್ತವ್ಯವಾಗಿರುತ್ತದೆ.

ಆ) ಆದರೆ ಎದರುದಾರ ನಂ.1 ರವರು ಒತ್ತುವರಿದಾರರನ್ನು ಗುರುತಿಸಿ ತೆರವುಗೊಳಿಸದೇ ದೂರುದಾರರೇ ಸರ್ವೆ ಮಾಡಿಸಿ ಒತ್ತುವರಿದಾರರ ನಕ್ಷೆ ನೀಡಿದಲ್ಲಿ ಆಗ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದಾರೆ. ಇದರಿಂದ ಕಂಡುಬರುವುದೇನೆಂದರೆ ಎದರುದಾರರು ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಮೇಲ್ನೋಟಕ್ಕೆ ಕಂಡುಬರುತ್ತದೆ.

ಇ) ದೂರುದಾರರ ದೂರಿನಲ್ಲಿ ನಮೂದಿಸಿರುವ ಆಸ್ತಿ ಪುರಸಭೆಯ ವ್ಯಾಪ್ತಿಯಲ್ಲಿ ಬರುವುದರಿಂದ, ಎದರುದಾರ ನಂ.2 ರವರು ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿರುವುದಿಲ್ಲವಾದ್ದರಿಂದ ಅವರನ್ನು ಈ ಪ್ರಕರಣದಿಂದ ಕೈಬಿಡುವುದು ಸೂಕ್ತವೆನಿಸುತ್ತದೆ.

ಈ) ಎದರುದಾರ ನಂ.3 ರವರು ನೇರವಾಗಿ ಯಾವುದೇ ಅಧಿಕಾರ ಹೊಂದದ ಕಾರಣ ಅವರ ವಿರುದ್ಧ ಆಪಾದಿಸಿರುವ ಅಂಶಗಳು ದೃಢಪಟ್ಟಿರುವುದಿಲ್ಲ. ಆದ್ದರಿಂದ ಅವರನ್ನು ಈ ಪ್ರಕರಣದಿಂದ ಕೈಬಿಡುವುದು ಸೂಕ್ತವೆನಿಸುತ್ತದೆ.

ಉ) ಆದ್ದರಿಂದ ಎದರುದಾರ ನಂ.1 ರವರು ಮಾತ್ರ ತಮ್ಮ ಕರ್ತವ್ಯ ನಿರ್ವಹಿಸದೇ ವಿಫಲರಾಗಿ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

8) ಈ ಪ್ರಕರಣದಲ್ಲಿ ಖಾಸ್ಗಾಗೆ ಸೇರಿದ ಸರ್ವೆ ನಂ. 9 ರಿಂದ 13 ಮತ್ತು ವೀರಭದ್ರನಪಾಳ್ಯದ ಸರ್ವೆ ನಂ.6, 8, 11, 14, 25, 26, 29 ಹಾಗೂ ಸರ್ವೆ ನಂ.19 ರಲ್ಲಿ 3 ಗುಂಟೆ ಅಳತೆಯ ಕಾಳಪ್ಪನಕುಂಟೆ ಪ್ರದೇಶವನ್ನು ಅನಧೀಕೃತ ಒತ್ತುವರಿದಾರರಿಂದ, ಖಾತೆದಾರರಿಂದ ತೆರವುಗೊಳಿಸಿ ಪುರಸಭೆ ಸ್ವಾಧೀನಕ್ಕೆ ಪಡೆದುಕೊಳ್ಳುವಂತೆ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸುವುದು ಅಗತ್ಯವಾಗಿರುತ್ತದೆ. ಆದ್ದರಿಂದ ಸಕ್ಷಮ ಪ್ರಾಧಿಕಾರವು ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12 (1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

9) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 9/11/16.

(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.